ದಿನಾಂಕಃ 16-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಎದುರುದಾರ ಪರ ಶ್ರೀ ಎಂಎಂಕೆ ವಕೀಲರಿಂದ:</u>

ಅಪಘಾತದ ಸಮಯದಲ್ಲಿ ನನ್ನ ವಯಸ್ಸು 44 ವರ್ಷ ಇತ್ತು. ಆ ಬಗ್ಗೆ ಆಧಾರ ಕಾರ್ಡ ಹಾಜರಪಡಿಸಿರುತ್ತೇನೆ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ವಯಸ್ಸು ಆ ಸಮಯದಲ್ಲಿ 44 ವರ್ಷ ಇತ್ತು ಎಂದು ತೋರಿಸಲು ಶಾಲಾ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ಅಪಘಾತವಾದಾಗ ನನ್ನ ವಯಸ್ಸು 44 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ವಯಸ್ಸು 50 ವರ್ಷ ಮೇಲ್ಪಟ್ಟು ಇತ್ತು ಎಂದರೆ ಸರಿಯಲ್ಲ. ನಾನು ಬಿಸ್ಕಿಟ್ ಡಿಸ್ಟ್ರಿಬ್ಯೂಟರ ವ್ಯಾಪಾರ ಮಾಡುತ್ತಾರೆ. ಈಗಲೂ ಸದರಿ ವ್ಯವಹಾರ ಮಾಡುತ್ತೇನೆ ಎಂದರೆ ಸಾಕ್ಷಿ ಮಾಡುತ್ತೇನೆ, ಆದರೆ ಮೊದಲಿನಷ್ಟು ಆದಾಯ ಇಲ್ಲ ಎಂದು ಹೇಳುತ್ತಾರೆ. ಮೊದಲು ಎಷ್ಟು ವ್ಯವಹಾರ ಮಾಡುತ್ತಿದ್ದೇನು, ಈಗ ಎಷ್ಟು ವ್ಯವಹಾರ ಮಾಡುತ್ತೇನೆ ಎಂದು ದಾಖಲೆ ಹಾಜರಪಡಿಸಿರುವುದಿಲ್ಲ. ಕಿರಾಣಾ ಹೋಲಸೇಲ್ ವ್ಯಾಪಾರ ಮಾಡುತ್ತಿರುವ ಬಗ್ಗೆ ನಾನು ದಾಖಲೆ ಹಾಜರಪಡಿಸಿಲ್ಲ. ನಾನು ಯಾವುದೇ ವ್ಯಾಪಾರ ಮಾಡುತ್ತಿಲ್ಲ, ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ವ್ಯಾಪಾರ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 19-05-2015 ರಂದು ಅಪಘಾತವಾಗಿರುತ್ತದೆ. ನನ್ನ ಪ್ರಮಾಣ ಪತ್ರ ಹಾಗೂ ಅರ್ಜಿಯಲ್ಲಿ ಅಪಘಾತವು ದಿನಾಂಕಃ 19-05-2018 ರಂದು ಆಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ಅಪಘಾತವು 2015 ರಲ್ಲಿ ಆಗಿರುವುದು ನಿಜ ಇರುತ್ತದೆ, 2018 ರಲ್ಲಿ ಅಲ್ಲ. 2018 ರಲ್ಲಿ ಅಪಘಾತ ಆಗಿರುತ್ತದೆ ಎಂದು ಅರ್ಜಿಯಲ್ಲಿ ಹಾಗೂ ಸಾಕ್ಷಿಯಲ್ಲಿ ಹೇಳಿರುವುದು ಸುಳ್ಳು ಇರುತ್ತದೆ. ಅಪಘಾತವು ಮಹೀಂದ್ರಾ ಗೂಡ್ಸ ವಾಹನದಿಂದ ಆಗಿರುತ್ತದೆ, ಅದರ ನಂಬರ ನೆನಪಿಲ್ಲ. ಅದಕ್ಕೆ ತಾತ್ಕಾಲಿಕ ನೋಂದಣಿ ಸಂಖ್ಯೆ ಇತ್ತು. ಅಪಘಾತದ ಮರುದಿನ ದೂರನ್ನು ನಾನೇ ನೀಡಿರುತ್ತೇನೆ. ಅಪಘಾತಪಡಿಸಿದ ವಾಹನ ಯಾವ ಬಣ್ಣದಿಂದ ಕೂಡಿತ್ತು ಎಂದು ನನಗೆ ಗೊತ್ತಿಲ್ಲ. ಮಹೀಂದ್ರಾ ಕಂಪನಿಯ ಚಿಹ್ನೆ ವಾಹನದ ಮೇಲೆ ಇರುವದರಿಂದ ಅಪಘಾತವು ಮಹೀಂದ್ರಾ ವಾಹನ

ಪಡಿಸಿರುವುದಾಗಿ ಹೇಳುತ್ತೇನೆ. ಅಪಘಾತಕ್ಕೆ ಮತ್ತು ವಾಹನಕ್ಕೆ ಯಾವುದೇ ಸಂಬಂಧ ಇಲ್ಲ, ಆದರೂ ಪರಿಹಾರ ಪಡೆಯುವ ಸಲುವಾಗಿ ಒಂದು ತಡವಾಗಿ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೆ ನನಗೆ ಅಪಘಾತಪಡಿಸಿದ ವಾಹನದ ಬಣ್ಣ ಯಾವುದಿತ್ತು ಎಂದು ಹೇಳಲು ಬರುವುದಿಲ್ಲ.

ಅಪಘಾತದ ನಂತರ ವೆಂಕಟೇಶ್ವರ ಆಸ್ಪತ್ರೆಗೆ ಮಹಾಲಿಂಗಪೂರದಲ್ಲಿ ಚಿಕಿತ್ಸೆ ಕುರಿತು ದಾಖಲಾಗಿರುತ್ತೇನೆ. ಅಪಘಾತದಲ್ಲಿ ನನ್ನ ಕಾಲು ಮತ್ತು ಕೈಗಳಿಗೆ ಗಾಯಗಳಾಗಿರುತ್ತವೆ. ಆಸ್ಪತ್ರೆಯಲ್ಲಿ ನನ್ನ ಎಡಗಾಲು ಶಸ್ತ್ರಚಿಕಿತ್ಸೆಗೆ ಒಳಪಡಿಸಿ ರಾಡ್ ಹಾಕಿರುತ್ತಾರೆ. ಆಸ್ಪತ್ರೆಯಲ್ಲಿ ಗುಣಮುಖವಾದ ನಂತರ ಬಿಡುಗಡೆ ಮಾಡಿರುತ್ತಾರೆ. ಆಸ್ಪತ್ರೆಯ ಚಿಕಿತ್ಸೆಗಾಗಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನಾನು ಯಾರ ಸಹಾಯವಿಲ್ಲದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಪಘಾತದ ಪೂರ್ವದಲ್ಲಿ ಹೇಗೆ ಇದ್ದೇನೋ ಹಾಗೆಯೇ ಈಗಲೂ ಇದ್ದೇನೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಈಗ ಮೊದಲಿನಂತೆ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಅಪಘಾತಕ್ಕೆ ಮತ್ತು ವಾಹನಕ್ಕೆ ಯಾವುದೇ ಇಲ್ಲ, ಆದರೂ ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ತಯಾರಿಸಿಕೊಂಡು ಹಾಜರ ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.16 17:48:17 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ

ದಿನಾಂಕಃ 16-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಎದುರುದಾರ ಪರ ಶ್ರೀ ಎಂಎಂಕೆ ವಕೀಲರಿಂದ:

ಅಪಘಾತದ ಸಮಯದಲ್ಲಿ ನನ್ನ ವಯಸ್ಸು 18 ವರ್ಷ ಇತ್ತು. ಆ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ನನ್ನ ವಯಸ್ಸು ಆ ಸಮಯದಲ್ಲಿ 18 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ವಯಸ್ಸು 25 ವರ್ಷ ಮೇಲ್ಪಟ್ಟು ಇತ್ತು ಎಂದರೆ ಸರಿಯಲ್ಲ. ನಾನು ಈಗ ಯಾವುದೇ ಕೆಲಸ ಮಾಡುವುದಿಲ್ಲ. ಮೊದಲು ನಾನು ಒಕ್ಕಲುತನ ಕೆಲಸ ಮಾಡುತ್ತಿದ್ದೇನು. ನಾನು ಒಕ್ಕಲುತನ ಕೆಲಸ ಮಾಡುತ್ತೇನೆ ಎಂದು ರುಜುವಾತುಪಡಿಸಲು ಆ ಬಗ್ಗೆ ಸಾಕ್ಷಿ ಮಾಡಿಸುತ್ತೇನೆ. ನಾನು ಯಾವ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ. ನಾನು ಒಕ್ಕಲುತನ ಕೆಲಸದಿಂದ ತಿಂಗಳಿಗೆ 30 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 19-05-2018 ರಂದು ಅಪಘಾತವಾಗಿರುತ್ತದೆ. ಅಪಘಾತವು ಮೋಟರ ಸೈಕಲ್ ಮತ್ತು ಮಹೀಂದ್ರಾ ಗೂಡ್ಸ ವಾಹನದ ಮಧ್ಯೆ ಆಗಿರುತ್ತದೆ. ಅಪಘಾತಪಡಿಸಿದೆ ಎಂದು ವಾಹನ ಯಾವ ಬಣ್ಣದಿಂದ ಕೂಡಿದೆ ಎಂದು ನೆನಪಿಲ್ಲ. ಸದರಿ ವಾಹನ ಈಗಲೂ ಯಾವ ಬಣ್ಣದಿಂದ ಕೂಡಿತ್ತು ಎಂದು ಹೇಳಲು ಬರುವುದಿಲ್ಲ.

ಅಪಘಾತದಲ್ಲಿ ನನ್ನ ಕಾಲು ಕಟ್ ಆಗಿದ್ದು, ಎಡಗಡೆಯ ಭುಜ ಮೇಲೆ ಗಾಯವಾಗಿತ್ತು. ಅಪಘಾತದ ನಂತರ ವೆಂಕಟೇಶ್ವರ ಆಸ್ಪತ್ರೆಗೆ ಮಹಾಲಿಂಗಪೂರದಲ್ಲಿ ಚಿಕಿತ್ಸೆ ಕುರಿತು ದಾಖಲಾಗಿರುತ್ತೇನೆ. ಆಸ್ಪತ್ರೆಯಲ್ಲಿ ನನ್ನನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸಿಲ್ಲ, ಸಾಮಾನ್ಯ ಚಿಕಿತ್ಸೆ ನೀಡಿ ಬಿಡುಗಡೆಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಚಿಕಿತ್ಸೆಗಾಗಿ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರಾಮವಾದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ನಾನು ಯಾರ ಸಹಾಯವಿಲ್ಲದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಪಘಾತಕ್ಕೆ ಮತ್ತು ಮಹೀಂದ್ರಾ ವಾಹನಕ್ಕೆ ಯಾವುದೇ ಸಂಬಂಧ ಇರದೇ ಇದ್ದರೂ, ಒಂದು ತಡವಾಗಿ ಪರಿಹಾರ ಪಡೆಯುವ

ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ವೈದ್ಯಾಧಿಕಾರಿಗಳಿಂದ ದಾಖಲೆಗಳನ್ನು ಪಡೆದು ಹಾಜರಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.07.16 17:48:24 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ